ಶ್ರೀ ಕೆ. ರಾಮಭಟ್.—ಸಹಕಾರಿ ಸಂಘದವರು ನಡೆಸುತ್ತಿದ್ದ ಕಟ್ಟಿಗೆ ಡಿಪೋವನ್ನು ಮುಚ್ಚಿರುವುದರಿಂದ, ಅದಕ್ಕೆ ಬದಲಾಗಿ ಅರಣ್ಯ ಇಲಾಖೆಯು ಪರಿಯಿಂದಲೇನಾದರೂ ಕಟ್ಟಿಗೆ ಡಿಪೋವನ್ನು ತೆರೆಯಲು ವ್ಯವಸ್ಥೆ ಮಾಡುವಿರಾ ?

† ಜಿ. ರಾಮೇಗೌಡ.—ಸದ್ಯಕ್ಕೆ, ಆ ವಿಚಾರ ಸರ್ಕಾರದ ಪರಿಶೀಲನೆಯಲ್ಲಿಲ್ಲ.

ಶ್ರೀ ಕೆ. ರಾಮಭಟ್—ಈಗ ಪುತ್ತೂರಿನಲ್ಲಿ ಖಾಸಗಿ ಕಟ್ಟಿಗೆ ಡಿಪೋಗಳು ೧೩ ಇವೆ. ಅಲ್ಲಿ ಇನ್ನಷ್ಟು ಕಟ್ಟಿಗೆ ಡಿಪೋಗಳ ಅಗತ್ಯವಿದ್ದಿದ್ದಾದರೆ ಮತ್ತು ಅದನ್ನು ಮಾನ್ಯ ಸಚಿವರ ಗಮನಕ್ಕೆ ತಂದರೆ ಅವರಿಗೆ ಕಟ್ಟಿಗೆ ಡಿಪೋ ಇಡಲು ಅಪ್ಪಣೆ ನೀಡುವಿರಾ ?

ಶ್ರೀ ಜಿ. ರಾಮೇಗೌಡ. —ನಿಮ್ಮ ಕ್ಷೇತ್ರದಲ್ಲಿ ಕಟ್ಟಿಗೆ ಡಿಪೋ ಅಗತ್ಯವಿದ್ದರೆ ಅದನ್ನು ಕಾರ್ಪೊರೇಷನ್ ಮಾಡಬೇಕು ಇದು ಸರ್ಕಾರ ಮಾಡುವ ಪ್ರಶ್ನೆಯಲ್ಲ.

ಶ್ರೀ ಕೆ. ರಾಮಭಟ್,—ಖಾಸಗಿ ವ್ಯಕ್ತಿಗಳು ಕಟ್ಟಿಗೆ ಡಿಪೋ ತೆರಯಬೇಕೆಂದು ಅಪೇಕ್ಷಿಪಟ್ಟರೆ ಯಾವ ಆಧಾರದ ಮೇಲೆ ಅವರಿಗೆ ಅಪ್ಪಣೆ ಕೊಡಲಾಗುವುದು ?

ಶ್ರೀ ಜಿ. ರಾಮೇಗೌಡ.—ಖಾಸಗಿಯವರಿಗೆ ಸೌದೆ ವ್ಯಾಪಾರ ಮಾಡಲು ಪ್ರೋತ್ಸಾಹ ಕೊಡುವುದನ್ನು ನಿಲ್ಲಿಸಲಾಗಿದೆ. ಆದುದರಿಂದ ತಮ್ಮ ಪ್ರಶ್ನೆ ಉದ್ಭವಿಸುವುದಿಲ್ಲ.

ಅಧ್ಯಕ್ಷರು.— ಪ್ರಶ್ನೆ ನಂ. ೩೪೪ ತಡೆಹಿಡಿಯಲಾಗಿದೆ.

KEB Assistant Engineer's Office at Sirguppa Town

445 SRI B. E. RAMAIAH (Siraguppa).—Will the Minister of State for Information and Youth Services be pleased to state :—

(a) whether there is any proposal before the Government for sanctioning of a KEB Assistant Engineer's Office at Siraguppa Town ;

(b) if so, whether the Government intend to take steps to locate Assistant Engineer's Office KEB at Sirguppa ?

SRI K. H. SRINIVAS (Minister of State for Information and Youth Services.)—

(a) No.

(b) Does not arise in view of reply to (a) above.

ಶ್ರೀ ಬಿ. ಇ. ರಾಮಯ್ಯ.—ನನ್ನ (ಅ) ಪ್ರಶ್ನೆಗೆ "ಇಲ್ಲ" ಎಂಬುದಾಗಿ ಮಾನ್ಯ ಸಚಿವರು ಉತ್ತರ ನೀಡಿದ್ದಾರೆ. ಸಿರಗುಪ್ಪ ತಾಲ್ಲೂಕಿನ ಜನರು ಸಹಾಯಕ ಇಂಜಿನಿಯರ್‌ರವರ ಕಛೇರಿ ಸ್ಥಾಪನೆಗಾಗಿ ಮನವಿ ಮಾಡಿಕೊಂಡಾಗ, ಮುಖ್ಯ ಇಂಜಿನಿಯರ್‌ರವರು ಖುದ್ದಾಗಿ ಪರಿಶೀಲನೆ ಮಾಡಿ, ಅಲ್ಲಿ ಸಹಾಯಕ ಇಂಜಿನಿಯರ್‌ರವರ ಕಛೇರಿ ತೆರೆಯಲು ಶಿಫಾರಸ್ಸನ್ನು ಮಾಡಿದ್ದಾರೆ. ಆದರೆ, ಮಾನ್ಯ ಸಚಿವರು ಲಿಖಿತ ಉತ್ತರದಲ್ಲಿ "ಇಲ್ಲ" ಎನ್ನುವುದಕ್ಕೆ ಕಾರಣವೇನು ?

† ಶ್ರೀ ಕೆ. ಎಚ್. ಶ್ರೀನಿವಾಸ್.—ಈ ಕುರಿತು ಮನವಿಗಳು ಬಂದಿಲ್ಲವೆಂದು ಹೇಳಿಲ್ಲ, ನಿರ್ದಿಷ್ಟವಾದ ಸಲಹೆ ಬಂದಿಲ್ಲವೆಂದು ಹೇಳಲಾಗಿದೆ. ೧೯೭೭-೭೮ನೇ ಇಸವಿ ಅನುಭವದ ಆಧಾರದ ಮೇಲೆ ಎಲ್ಲೆಲ್ಲಿ ಎಷ್ಟೆಷ್ಟು ಕೆಲಸದ ಒತ್ತಡವಿರುವ ಬಗ್ಗೆ ವಿದ್ಯುಚ್ಛಕ್ತಿ ಮಂಡಲಿಯವರು ವರದಿಯನ್ನು ತರಿಸುತ್ತಿದ್ದಾರೆ, ಈ ಆಧಾರದ ಮೇಲೆ ಡಿವಿಜನ್ ಅಥವಾ ಸಬ್ ಡಿವಿಜನ್ ಕಛೇರಿಗಳನ್ನು ತೆರೆಯುವ ಅಗತ್ಯವಿದ್ದರೆ, ಆ ಕುರಿತು ಕ್ರಮ ತೆಗೆದುಕೊಳ್ಳುವರು.

---

† Indicates that remarks or speeches have not been revised by the member concerned.

ಶ್ರೀ ಬಿ. ಇ. ರಾಮಯ್ಯ.—ವಿದ್ಯುಚ್ಛಕ್ತಿಗೆ ಸಂಬಂಧಿಸಿದ ಯಾವುದೇ ವ್ಯವಹಾರಕ್ಕೆ ಸಿರುಗುಪ್ಪ ತಾಲ್ಲೂಕಿನವರು ಬಳ್ಳಾರಿಗೆ ಬರಬೇಕಾಗಿರುವುದರಿಂದ, ಆ ಭಾಗದ ರೈತರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಶ್ರೀ ಕೆ. ಎಚ್. ಶ್ರೀನಿವಾಸ್.— ಇದು ಸರ್ಕಾರದ ಗಮನಕ್ಕೆ ಬಂದಿಲ್ಲ. ಕಛೇರಿಗಳನ್ನು ತೆಗೆಯಲು ಮಂಡಲಿಯವರು ಕೆಲವು ನಾಮ್ರ್ಗಳನ್ನು ಇಟ್ಟುಕೊಂಡಿದ್ದಾರೆ. ಆ ಪ್ರಕಾರವಾಗಿ ಡಿವಿಜನ್ ಅಥವಾ ಸಬ್ ಡಿವಿಜನ್ ಕಛೇರಿಗಳನ್ನು ತೆರೆಯುವರು. ಆದರೆ ಒಂದು ಕಛೇರಿ ತೆಗೆದಾಗ ಅಲ್ಲಿ ನಡೆಸುವುದಕ್ಕೆ ಬೇಕಾಗುವಷ್ಟು ಕೆಲಸವಿಲ್ಲದಿದ್ದರೆ, ವಿದ್ಯುಚ್ಛಕ್ತಿ ಮಂಡಲಿಯಲ್ಲಿರುವ ತತ್ವಗಳ ಆಧಾರದ ಮೇಲೆ ತೆರೆಯುವುದಕ್ಕೆ ಬರುವುದಿಲ್ಲ, ಆದುದರಿಂದ, ಮಾನ್ಯ ಸದಸ್ಯರು ನಿರ್ದಿಷ್ಟ ಸಲಹೆಯನ್ನು ನನ್ನ ಕಡೆಗೆ ಕಳುಹಿಸಿಕೊಟ್ಟರೆ, ಕೂಲಂಕಷವಾಗಿ ವಿಚಾರ ಮಾಡುವ ಸಲುವಾಗಿ ವಿದ್ಯುಚ್ಛಕ್ತಿ ಮಂಡಲಿಗೆ ಸಲಹೆ ಮಾಡುತ್ತೇನೆ.

ಶ್ರೀ ಬಿ. ಇ. ರಾಮಯ್ಯ.—ಇಲ್ಲಿ ಒತ್ತಡ ಜಾಸ್ತಿ ಇದೆ, ಇಲ್ಲಿ ಒಂದು ಸಹಾಯಕ ಇಂಜಿನಿಯರ್ ರವರ ಕಛೇರಿಯನ್ನು ತೆರೆಯುವ ಅಗತ್ಯವಿದೆ ಎಂದು ಚೀಫ್ ಇಂಜಿನಿಯರ್ರವರು ಸರ್ಕಾರಕ್ಕೆ ಸಲಹೆ ಮಾಡಿದ್ದಾರೆ. ಆದುದರಿಂದ, ಮಾನ್ಯ ಸಚಿವರು ಇದನ್ನು ಪುನರ್ಪರಿಶೀಲನೆ, ಮಾಡಿ ಆದಷ್ಟು ಜಾಗ್ರತೆ ಅಲ್ಲಿ ಕಛೇರಿಯನ್ನು ತೆರೆಯಲು ಪ್ರಯತ್ನ ಮಾಡುವರೆ?

ಶ್ರೀ ಕೆ. ಎಚ್. ಶ್ರೀನಿವಾಸ್.—ಸಲಹೆಯನ್ನು ಸರ್ಕಾರಕ್ಕೆ ಕಳುಹಿಸುವ ಪ್ರಶ್ನೆ ಬರುವುದಿಲ್ಲ ವಿದ್ಯುಚ್ಛಕ್ತಿ ಮಂಡಲಿಯವರೇ ಈ ಕುರಿತು ತೀರ್ಮಾನ ತೆಗೆದುಕೊಳ್ಳಬಹುದು. ಆದುದರಿಂದ, ಈ ರೀತಿ ಸಲಹೆ ಸರ್ಕಾರಕ್ಕೆ ಬಂದಿಲ್ಲ, ಬರುವುದಕ್ಕೆ ಯಾವ ಕಾರಣವೂ ಇಲ್ಲ. ವಿದ್ಯುಚ್ಛಕ್ತಿ ಮಂಡಲಿಯವರೇ ತೀರ್ಮಾನ ತೆಗೆದುಕೊಳ್ಳಬಹುದು, ಅವರಿಗೆ ಸಾಕಷ್ಟು ಅಧಿಕಾರವಿದೆ. ಒಂದು ವೇಳೆ ಮುಖ್ಯ ಇಂಜಿನಿಯರ್ರವರು ಈ ವಿಚಾರವನ್ನು ವಿದ್ಯುಚ್ಛಕ್ತಿ ಮಂಡಲಿ ಗಮನಕ್ಕೆ ತಂದಿದ್ದರೆ, ಆ ಬಗ್ಗೆ ಸೂಕ್ತ ತೀರ್ಮಾನ ತೆಗೆದುಕೊಳ್ಳುತ್ತಾರೆಂದು ನಾನು ನಿರೀಕ್ಷಿಸುತ್ತೇನೆ.

ಶ್ರೀ ಬಿ.ಇ. ರಾಮಯ್ಯ.—ಸಿರಗುಪ್ಪದಲ್ಲಿ ಒತ್ತಡ ಜಾಸ್ತಿ ಇರುವುದರಿಂದ ಅಲ್ಲಿ ಒಂದ ಸಹಾಯಕ ಇಂಜಿನಿಯರ್ರವರ ಕಛೇರಿ ತೆರೆಯುವಂತೆ ವಿದ್ಯುಚ್ಛಕ್ತಿ ಮಂಡಲಿಗೆ ತಾವು ಆದೇಶ ನೀಡುವಿರಾ?

ಶ್ರೀ ಕೆ.ಎಚ್. ಶ್ರೀನಿವಾಸ್ — ವಿದ್ಯುಚ್ಛಕ್ತಿ ಮಂಡಲಿ ಆಡಳಿತ ಬಗ್ಗೆ ಏನಾದರೂ ನೀತಿ ನಿರ್ದೇಶನಗಳನ್ನು ಕೊಡುವುದಕ್ಕೆ ನಮಗೆ ಅಧಿಕಾರವಿದೆ ಆದರೆ ಅಲ್ಲಿ ಕಛೇರಿ ತೆಗೆಯಬೇಕು ಅಥವಾ ತೆಗೆಯಬಾರದೆನ್ನುವುದು ವಿದ್ಯುಚ್ಛಕ್ತಿ ಮಂಡಲಿಗೆ ಬಿಟ್ಟಿದ್ದು. ಬೇಕಾದರೆ, ನಾನು ಮಾನ್ಯ ಸದಸ್ಯರ ಅಭಿಪ್ರಾಯವನ್ನು ಸೂಚನೆ ರೂಪದಲ್ಲಿ ಮಂಡಲಿಯ ಗಮನಕ್ಕೆ ತರುತ್ತೇನೆ.

Elections to Corporations

599. SRI M. C. BASAPPA (Chamarajanagar).— Will the Minister for Municipal Administration be pleased to state :—

(a) the number of Municipal Corporations, Major and Minor Municipalities for which elections are over due in the State as on 31st December 1978 ;

(b) how many of them are under extension ;

(c) in how many cases, Administrators are appointed ?

SRI H. C. SRIKANATIAH (Minister for Municipal Administration).—

(a) 4 Corporations, 11 City Municipal Councils, 164 Town Municipal Councils.

(b) 2 City Municipal Councils, 38 Town Municipal Councils.